ದಿನಾಂಕ 23-01-2026 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು :** ಪ್ರತಿವಾದಿಗಳ ಪರ ಶ್ರೀ ಎಸ್ ಕೆ ಕೆ ವಕೀಲರಿಂದ.

ದಾವಾ ಸ್ವತ್ತಿನಲ್ಲಿ ಪ್ರತಿವಾದಿಯರು ತೊಂದರೆ ಮಾಡಿದ್ದರಿಂದ ನಮ್ಮ ಕಬ್ಜೆಯನ್ನು ರಕ್ಷಿಸಿಕೊಳ್ಳಲು ಹೂಡಿದ್ದೇನೆ ಎನ್ನುತ್ತಾರೆ. ಪ್ರತಿವಾದಿ 5 ರವರನ್ನು ಯಾವ ಕಾರಣಕ್ಕಾಗಿ ಪಕ್ಷಗಾರರನ್ನಾಗಿ ಮಾಡಿದ್ದೀರಿ ಎಂದರೆ ಸಾಕ್ಷಿ ಪ್ರತಿವಾದಿ 5 ರವರು ಪ್ರತಿವಾದಿ 1 ರಿಂದ 4 ರವರಿಗೆ ತೊಂದರೆ ನೀಡುವಂತೆ ಒತ್ತಾಯ ಮಾಡುತ್ತಿದ್ದರು ಹಾಗಾಗಿ ಪಕ್ಷಗಾರರನ್ನಾಗಿ ಮಾಡಿದ್ದೇನೆ. ಪ್ರತಿವಾದಿ 5 ರವರು ಪ್ರತಿವಾದಿ 1 ರಿಂದ 4 ರವರಿಗೆ ತೊಂದರೆ ನೀಡುವಂತೆ ಒತ್ತಾಯ ಮಾಡುತ್ತಿದ್ದರು ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಪ್ರತಿವಾದಿ 1 ರಿಂದ 4 ರವರಿಗೆ ತೊಂದರೆ ಕೊಡುತ್ತಿದ್ದಾರೆ ಎಂದು ದೂರು ನೀಡಿರುತ್ತೀರಾ ಎಂದರೆ ಸಾಕ್ಷಿ ದೂರು ನೀಡಲು ಹೋದಾಗ ಸಿವಿಲ್ ಸ್ವರೂಪದ್ದು ಎಂದು ನ್ಯಾಯಾಲಯಕ್ಕೆ ಹೋಗಲು ತಿಳಿಸಿರುತ್ತಾರೆ ಎನ್ನುತ್ತಾರೆ. ಪ್ರತಿವಾದಿಯರು 16 ಗುಂಟೆಯನ್ನು ಮಾರಾಟ ಮಾಡಿದ್ದರ ಕುರಿತು ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಾವಾ ಆಸ್ತಿಗೆ ನೀವು ಹೇಗೆ ಮಾಲೀಕರಾಗಿದ್ದೀರಿ ಎಂದರೆ ಸಾಕ್ಷಿ ದಾವೆ ಚಾಲ್ತಿಯಲ್ಲಿ ಇದೆ ದಾವೆ ಮುಗಿಯುವವರೆಗೂ ಕ್ರಯ ಪತ್ರ ಮಾಡುವುದು ಬೇಡ ಎಂದು ಪ್ರತಿವಾದಿ 1 ರಿಂದ 4 ರವರು ನನಗೆ ಜಿ ಪಿ ಎ ಬರೆದುಕೊಟ್ಟಿದ್ದರು ಎನ್ನುತ್ತಾರೆ. ನೀವು ಹಾಜರುಪಡಿಸಿದ ಜಿ ಪಿ ಎ ದಲ್ಲಿ ನೀವೆ

ಬಾಂಡ್ ಪತ್ರ ಖರೀದಿಸಿರುತ್ತೀರಿ ಎಂದು ನಮೂದಿಸಲಾಗಿದೆ ಎಂದರೆ ಸರಿ. ಜಿ ಪಿ ಎ ಬರೆದುಕೂಡುವ ಸಮಯದಲ್ಲಿ ಎಷ್ಟು ದಿನಗಳ ನಂತರ ಕ್ರಯ ಪತ್ರ ಬರೆದುಕೊಡುತ್ತೇನೆ ಎಂದು ತಿಳಿಸಿದ್ದರು ಎಂದರೆ ಸಾಕ್ಷಿ 2-3 ವರ್ಷಗಳ ನಂತರ ಬರೆದುಕೊಡುತ್ತೇನೆ ಎಂದು ತಿಳಿಸಿದ್ದರು, ದಾವೆ ಚಾಲ್ತಿಯಲ್ಲಿ ಇದ್ದಿದ್ದರಿಂದ ಬಹಳ ದಿನಗಳವರೆಗೆ ಕ್ರಯ ಪತ್ರ ಬರೆದುಕೊಡಲು ಆಗಲಿಲ್ಲ ಎನ್ನುತ್ತಾರೆ. ದಾವೆ ಚಾಲ್ತಿಯಲ್ಲಿ ಇತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ದಾವೆ ಮುಕ್ತಾಯವಾದ ನಂತರ ಖರೀದಿ ಪತ್ರ ಬರೆದುಕೊಡುವಂತೆ ನೊಟೀಸ್ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಪ್ರತಿವಾದಿ 1 ರಿಂದ 4 ರವರು ನನಗೆ ಜಿ ಪಿ ಎ ಬರೆದುಕೊಟ್ಟ ಕಾರಣ ನೊಟೀಸ ಕೊಡುವ ಅವಶ್ಯಕತೆ ಇರಲಿಲ್ಲಎನ್ನುತ್ತಾರೆ ಮುಂದುವರೆದು ನಾನು ಪ್ರತಿವಾದಿ 1 ರಿಂದ 4 ರವರಿಗೆ ಕ್ರಯ ಪತ್ರ ಬರೆದುಕೊಡಲು ಕೇಳಿದೆ ಅವರು ಬರಲಿಲ್ಲ ಹಾಗಾಗಿ ನಾನೇ ಕ್ರಯ ಪತ್ರ ಬರೆದುಕೊಂಡಿದ್ದೇನೆ. ಪ್ರತಿವಾದಿ 1 ರಿಂದ 4 ರವರಿಗೆ ಕ್ರಯ ಪತ್ರ ಬರೆದುಕೊಡಲು ಯಾರ ಸಮಕ್ಷಮ ಕೇಳಿದ್ದೀರಿ ಎಂದು ದಾವೆಯಲ್ಲಿ ನಮೂದಿಸಿದ್ದೀರಾ ಎಂದರೆ ಸಾಕ್ಷಿ ಮೌಖಿಕವಾಗಿ ಕೇಳಿದ್ದೇನೆ ಎನ್ನುತ್ತಾರೆ. ಪ್ರತಿವಾದಿ 1 ರಿಂದ 4 ರವರಿಗೆ ಕ್ರಯ ಪತ್ರ ಬರೆದುಕೊಡಲು ಯಾವತ್ತೂ ಕೇಳಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನಲ್ಲಿ ಇವತ್ತಿನವರೆಗೂ ಪ್ರತಿವಾದಿ 1 ರಿಂದ 4 ರವರು ಕಬ್ಜೆಯಲ್ಲಿ ಇದ್ದಾರೆ ಎಂದರೆ ಸರಿಯಲ್ಲ, ನಾನು ಕಬ್ಜೆಯಲ್ಲಿ ಇದ್ದೇನೆ ಕಟ್ಟಿಗೆ ಇಟ್ಟಿದ್ದೇನೆ ಎನ್ನುತ್ತಾರೆ. ನೀವೆ ಕಬ್ಜೆಯಲ್ಲಿ ಇದ್ದೀರಿ ಕಟ್ಟಿಗೆ ಇದ್ದೀರಿ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಖರೀದಿ ಪತ್ರ ಬರೆದುಕೊಳ್ಳುವ ಸಮಯದಲ್ಲಿ ಪ್ರತಿವಾದಿ 1 ರಿಂದ 4 ರವರು

ಹಳಿಯಾಳದಲ್ಲಿಯೇ ಇದ್ದರು ಅವರಿಗೆ ಮೋಸ ಮಾಡುವ ಉದ್ದೇಶದಿಂದ ಜಿ ಪಿ ಎ ಪಡೆದು ಕ್ರಯ ಪತ್ರ ಮಾಡಿಕೊಂಡಿದ್ದೀರಿ ಎಂದರೆ ಸಾಕ್ಷಿ ನಾನು ಕೇಳಿದಾಗ ಅವರು ಬರಲಿಲ್ಲ ಆದ್ದರಿಂದ ನಾನೇ ಮಾಡಿಕೊಂಡಿದ್ದೇನೆ ಎನ್ನುತ್ತಾರೆ. ಕ್ರಯ ಪತ್ರವಾದ ನಂತರ ನಿಮ್ಮ ಹೆಸರಿಗೆ ದಾವಾ ಸ್ವತ್ತನ್ನು ದಾಖಲಿಸಬಾರದು ಎಂದು ತಹಶೀಲ್ದಾರ ಕಚೇರಿಗೆ ಪ್ರತಿವಾದಿ 1 ರಿಂದ 4 ರವರು ತಕರಾರು ಸಲ್ಲಿಸಿದ್ದರು ಎಂದರೆ ಸರಿ. ಅಲ್ಲಿ ನಿಮ್ಮ ವಿರುದ್ಧ ಆದೇಶ ಆಯಿತು, ನಂತರ ಎಸಿ ನ್ಯಾಯಾಲಯದಲ್ಲಿ ನಿಮ್ಮ ಪರವಾಗಿ ಆದೇಶ ಆಯಿತು ಎಂದರೆ ಸರಿ. ಪ್ರತಿವಾದಿ 1 ರಿಂದ 4 ರವರಿಗೆ ಇವತ್ತಿನರೆಗೂ ದಾವಾ ಸ್ವತ್ತನ್ನು ಮಾರುಕಟ್ಟೆಯ ಮೌಲ್ಯ ಕೊಟ್ಟಿಲ್ಲ ಎಂದರೆ ಸರಿಯಲ್ಲ, ಕೊಟ್ಟಿದ್ದೇನೆ ಎನ್ನುತ್ತಾರೆ. ಕ್ರಯ ಪತ್ರದಲ್ಲಿ ತೋರಿಸಿದ ನೋಂದಣಿ ಹಣವನ್ನು ಮಾತ್ರ ಕಟ್ಟಿದ್ದೀರಿ ಕ್ರಯದ ಹಣವನ್ನು ಪ್ರತಿವಾದಿ 1 ರಿಂದ 4 ರವರಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಕ್ರಯದ ಹಣವನ್ನು ಪ್ರತಿವಾದಿ 1 ರಿಂದ 4 ರವರಿಗೆ ಕೊಟ್ಟಿದ್ದೀರಿ ಎಂದು ತೋರಿಸಲು ದಾಖಲೆಗಳು ಇವೆಯೇ ಎಂದರೆ ಸಾಕ್ಷಿ ನಾನು ನಗದು ರೂಪದಲ್ಲಿ ಹಣ ಕೊಟ್ಟಿದ್ದೇನೆ ದಾಖಲೆಗಳು ಇಲ್ಲ ಎನ್ನುತ್ತಾರೆ. ಮಾರುಕಟ್ಟೆಯ ಮೌಲ್ಯದ ಹಣವನ್ನು ಬ್ಯಾಂಕ್ ನಿಂದ ಪಡೆದ ಬಗ್ಗೆ ದಾಖಲೆಗಳು ಇವೆಯೇ ಎಂದರೆ ಸಾಕ್ಷಿ ನಾನು ಮನೆಯಲ್ಲಿ ಇದ್ದ ಹಣವನ್ನು ನೀಡಿದ್ದೇನೆ ಎನ್ನುತ್ತಾರೆ. ಕ್ರಯದ ಹಣವನ್ನು ಪ್ರತಿವಾದಿ 1 ರಿಂದ 4 ರವರಿಗೆ ಯಾವಾಗ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಜಿ ಪಿ ಎ ಆದ ನಂತರ ಕೊಟ್ಟಿದ್ದೇನೆ ಎನ್ನುತ್ತಾರೆ. ಜಿ ಪಿ ಎ ಆದ ನಂತರ ಹಣ ಕೊಟ್ಟಿದ್ದೇನೆ ಎಂದು ತೋರಿಸಲು ದಾಖಲೆಗಳು ಇವೆಯೇ ಎಂದರೆ ಸಾಕ್ಷಿ ನಾನು ಅವರ ವಿಶ್ವಾಸದ ಮೇಲೆ ಕೊಟ್ಟಿದ್ದೇನೆ ಎನ್ನುತ್ತಾರೆ. ಕ್ರಯದ ಹಣವನ್ನು ಪ್ರತಿವಾದಿ 1 ರಿಂದ 4 ರವರಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ರಿಂದ 4 ರವರು ನಿಮ್ಮ

ಮೇಲೆ ವಿಶ್ವಾಸ ಇಟ್ಟು ಜಿ ಪಿ ಎ ಬರೆದುಕೊಟ್ಟಿದ್ದರು ಅವರಿಗೆ ಮೋಸ ಮಾಡುವ ಉದ್ದೇಶದಿಂದ ಜಿ ಪಿ ಎ ಆಧಾರದ ಮೇಲೆ ಕ್ರಯ ಪತ್ರ ಬರೆದುಕೊಂಡಿದ್ದೀರಿ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.